**OS No.61/2025.**

Case called out.

**–: <u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ</u> :–**

ವಾದಿಯು, ಪ್ರತಿವಾದಿಯರ ವಿರುದ್ಧ ಆಜ್ಞಾಪಕ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ., ಕ್ರಮಾದೇಶ 26 ನಿಯಮ 9 ರಡಿಯಲ್ಲಿ ಸಲ್ಲಿಸಿ ದಾವಾ ಸ್ಥಳವನ್ನು ಪರಿಶೀಲನೆ ಮಾಡಿ ವರದಿ ನೀಡುವಂತೆ ಏಕಪಕ್ಷೀಯವಾಗಿ ನ್ಯಾಯಾಲಯದಿಂದ ಒಬ್ಬ ಹಿರಿಯ ವಕೀಲರನ್ನು ನಿಯೋಗಿಯಾಗಿ ನೇಮಕ ಮಾಡುವಂತೆ ಕೋರಿಕೊಂಡಿರುತ್ತಾರೆ.

ಈ ಹಂತದಲ್ಲಿ ವಾದಿ ಪರ ವಕೀಲರು ಗೌರವಾನ್ವಿತ ನ್ಯಾಯಾಲಯಗಳ ಈ ಕೆಳಗಿನ ನಿರ್ಣಿತ ತೀರ್ಪುಗಳನ್ನು ಅವಲಂಬಿಸಿರುತ್ತಾರೆ.

- In SHIVARAMA BHAT & Another V/s MAHABALA BHATT MULIYA & Others, wherein Hon'ble High Court of Mysore held that, the Court has power to make an ex-parte order issuing a commission. If upon making an ex-parte appointment of the commissioner, the Court directs the commissioner to issue notice to the parties interested before executing the commission, there is no disobedience of or departure from R.18 of Or.26 CPC.
- In Chintapatla Arvind Babu and another V/s Smt. K. Balakistamma alias Bhargavi and another, reported in AIR 1992 Andhra Pradesh 300 wherein Supreme Court of India held that,

(A ) Order 26, Rule 9- "Case which has been decided" _ Petition praying for appointment of Commissioner for localising site in dispute with reference to documents of title – Order of dismissal of petition is case decided and is revisable.

**AIR 1979 Punj and Har 76, Dissented from.**

When a party complains that the opposite party was attempting to disturb the features and applies for appointment of a Commissioner under O.26, R. 9, C.P.C. refusal to allow such petition prevents the party from having clinching evidence in proving the said fact. There may be cases where the matter in dispute can be resolved by appointment of a Commissioner for localising the site in dispute with reference to the title deeds and the boundary dispute in regard to the vacant site is one such case. If the Court declines to appoint a Commissioner, it may result in the perpetration of gross injustice if the relief is denied to the aggrieved litigant where it is most needed.

The report of the Commissioner appointed under O.26, R.9 is evidence and it is generally more credible evidence. The expression 'local investigation' used in O.26, R. 9 is wide enough to include 'localisation with reference to the documents of title'. So, the impugned order whereby the lower Court declined to appoint Commissioner for localising the site in dispute with reference to the documents of title is revisable.

- Sree Sreepadaraja Mutt V/s Pyra Ramaiah, by L.Rs', reported in 1999 (2) KCCR 1216, wherein Hon'ble High Court of Karnataka held that,

Held : For the evidence which could be produced in the Court, no doubt ordinarily commission is not issued for collection of evidence. But, report of the spot situation has to be produced before the Court if the dispute relates to marking of the boundary or nature of the property, the evidence which could be produced is only through the commission which it may give and find out about the situation of the property and facts existing on the spot so as to help the Court to

arrive at a conclusion about the nature of the property along with other evidence produced by the parties...... The plaintiff is also at liberty to cross-examine the Commissioner who may go on spot inspection. No doubt inspection has to be done in presence of the parties. Parties may also file objections to the Commissioner's report.

ಈಗಾಗಲೇ ಮಾನ್ಯ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ವಾದವನ್ನು ಆಲಿಸಿ ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಿ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲೆ ಆದೇಶ ಮಾಡುವುದಕ್ಕಿಂತ ಮೊದಲು ಉಭಯ ಪಕ್ಷಗಾರರನ್ನು ಆಲಿಸುವುದು ಅವಶ್ಯಕತೆ ಇದೆ ಎಂಬ ಅಭಿಪ್ರಾಯಕ್ಕೆ ಬಂದು ಪ್ರತಿವಾದಿಯರಿಗೆ ತುರ್ತು ನೋಟಿಸ್ ಹಾಗೂ ದಾವಾ ಸಮನ್ಸ್ ರವಾನಿಸಲು ಕಛೇರಿಗೆ ಆದೇಶ ಮಾಡಿದ್ದು ಇರುತ್ತದೆ.

ಈಗ ಮಾನ್ಯ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ವಾದವನ್ನು ಆಲಿಸಲಾಯಿತು ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ದಾವಾ ಸ್ಥಳಗಳಲ್ಲಿನ ರಸ್ತೆಯ ಅಥವಾ ದಾರಿಯ ಬಗ್ಗೆ ಕ್ಲೇಮನ್ನು ಮಾಡುತ್ತಿದ್ದು, ಪ್ರತಿವಾದಿಯರಿಗೆ ಯಾವುದೇ ನೋಟಿಸನ್ನು ನೀಡದೇ ಮಾನ್ಯ ನ್ಯಾಯಾಲಯದಿಂದ ಒಬ್ಬ ನ್ಯಾಯವಾದಿಯನ್ನು ಏಕಪಕ್ಷೀಯವಾಗಿ ನೇಮಕ ಮಾಡಿ ದಾವಾ ಸ್ಥಳಕ್ಕೆ ಕಳುಹಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆದರೆ, ಈ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದೇಶ ಮಾಡುವುದಕ್ಕಿಂತ ಮೊದಲು ಅಥವಾ ಮಾನ್ಯ ನ್ಯಾಯಾಲಯದಿಂದ ಒಬ್ಬ ಹಿರಿಯ ನ್ಯಾಯವಾದಿಯನ್ನು ನಿಯೋಗಿಯಾಗಿ ನೇಮಕ ಮಾಡಿ ದಾವಾ ಸ್ಥಳಕ್ಕೆ ಕಳುಹಿಸುವ ಮೊದಲು ಉಭಯ ಪಕ್ಷಗಾರರನ್ನು ಆಲಿಸುವುದು ಅವಶ್ಯಕತೆ ಇದೆ

ಎಂಬ ಅಭಿಪ್ರಾಯಕ್ಕೆ ಮಾನ್ಯ ನ್ಯಾಯಾಲಯವು ಬರುತ್ತದೆ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ಪ್ರತಿವಾದಿಯರಿಗೆ ತುರ್ತು ನೋಟಿಸ್ ಹಾಗೂ ದಾವಾ ಸಮನ್ಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

**ಮುಂದಿನ ವಿಚಾರಣೆ ದಿನಾಂಕ** 02.05.2025.

ಸಹಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**